## ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ, ಪೊನ್ನಂಪೇಟೆ.

**ಕ್ರಿ.ಮೊ.ಸಂಖ್ಯೆ:665/2019**

ಪಿರ್ಯಾದುದಾರರು: :ರಾಜ್ಯ ಸರ್ಕಾರ,
ಗೋಣಿಕೊಪ್ಪ ಪೋಲೀಸ್ ಠಾಣೆ.

ವಿರುಧ್ಧ

ಆರೋಪಿ: ಶ್ರೀ ಮಾಚಂಗಡ ಟಿ.ಸಂಪತ್,
ತಂದೆ: ಪೌತಿ ಸೋಮಯ್ಯ,
ಪ್ರಾಯ: 30 ವರ್ಷ,
ವಾಸ: ಕೆನರ ಬ್ಯಾಂಕ್ ಹತ್ತಿರ,
ಬಿಕ್ಕಸೊಡ್ಲೂರು ಗ್ರಾಮ,
ಕೊಡಗು.

### ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಗಳ ಹೇಳಿಕೆ

ಪ್ರಶ್ನೆ ಸಂಖ್ಯೆ - 1 : ಇದುವರೆವಿಗೂ ಅಭಿಯೋಜನೆ ಪರ ಸಾಕ್ಷ್ಯ ನುಡಿದ ಸಾಕ್ಷಿಗಳ ಸಾಕ್ಷ್ಯವನ್ನು ಆಲಿಸಿದ್ದೀರಾ?

ಉ: ಕೇಳಿಸ್ಕೊಂಡೆ

ಪ್ರಶ್ನೆ ಸಂಖ್ಯೆ - 2. ಪ್ರಾ.ಸಾ.1/ಚಾ.ಸಾ.1 ಎ.ಬಿ.ಮನ್ಮಥ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ:27.01.2019 ರಂದು ರಾತಿರ 7 ಗಂಟೆಗೆ ಅರವತ್ತೋಕ್ಲು ಗ್ರಾಮದಲ್ಲಿ ಸುಬ್ರಮಣಿಯವರು ಗೋಣಿಕೊಪ್ಪ ಕಡೆಯಿಂದ ಪೊನ್ನಂಪೇಟೆ ಕಡೆಗೆ ಟಿ.ವಿ.ಎಸ್ ಸ್ಟಾರ್ ಸಿಟಿ ಬೈಕಿನಲ್ಲಿ ಹೋಗುವಾಗ, ಎದುರುಗಡೆಯಿಂದ ಬಂದ ಹೋಂಡಾ ಆಕ್ಟೀವಾ ಸ್ಕೂಟಿ ಅಪಘಾತ ಮಾಡಿರುತ್ತದೆ. ಆ ಸಮಯದಲ್ಲಿ ಚಾ.ಸಾ.1 ರವರು ಸುಬ್ರಮಣಿಯವರ ಬೈಕಿನ ಹಿಂಬದಿಯಲ್ಲಿ ಬರುತ್ತಿದ್ದರು, ಅಪಘಾತವಾದ ತಕ್ಷಣ ಚಾ.ಸಾ.1 ರವರು ಕಾರನ್ನು ನಿಲ್ಲಿಸಿ ಹೋಗಿ ನೋಡಲಾಗಿ ಸುಬ್ರಮಣಿಯವರ ತಲೆಯ ಹಿಂಭಾಗಕ್ಕೆ ಪೆಟ್ಟಾಗಿ ರಕ್ತ ಬರುತ್ತಿತ್ತು. ತಕ್ಷಣವೇ ಚಾ.ಸಾ.1 ರವರು ಅಂಬುಲೆನ್ಸ್ ಗೆ ಕರೆ ಮಾಡಿ 3 ಜನರನ್ನು ಗೋಣಿಕೊಪ್ಪ ಆಸ್ಪತ್ರೆಗೆ ಕಳುಹಿಸಿ ಕೊಟ್ಟಿರುತ್ತಾರೆ. ನಂತರ ಅವರು ಸಹ ಆಸ್ಪತ್ರೆಗೆ ಹೋಗಿದ್ದಾಗ ಅಲ್ಲಿನ ವೈದ್ಯರು ಹೆಚ್ಚಿನ ಚಿಕಿತ್ಸೆಗೆ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿದಾಗ ಸುಬ್ರಮಣೆಯವರನ್ನು ಮೈಸೂರಿನ ಕೆ.ಆರ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ಮರುದಿನ ಬೆಳಿಗ್ಗೆ 4 ಗಂಟೆಯ ಸಮಯದಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಸುಬ್ರಮಣಿಯವರು ತೀರಿಕೊಂಡಿರುತ್ತಾರೆ. ನಂತರ ಚಾ.ಸಾ.1 ರವರು ವಾಪಸ್ಸು ಗೋಣಿಕೊಪ್ಪಗೆ ಬಂದು ಪೋಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉ: ಸುಳ್ಳು

**ಪ್ರಶ್ನೆ ಸಂಖ್ಯೆ - 3.** ಪ್ರಾ.ಸಾ.1/ಚಾ.ಸಾ.1 ಎ.ಬಿ.ಮನ್ಮಥ ರವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನುಡಿಯುತ್ತಾ, ದೂರು ಕೊಟ್ಟ ಮರುದಿನ ಚಾ.ಸಾ.1 ರವರು ತೋರಿಸಿಕೊಟ್ಟ ಸ್ಥಳದಲ್ಲಿ ಪೋಲೀಸರು ಕೃತ್ಯ ಸ್ಥಳ ಮಹಜರ್ ಕ್ರಮ ಕೈಗೊಂಡು, ಫೋಟೋ ಸಹ ತೆಗೆದಿರುತ್ತಾರೆ. ಅಲ್ಲಿ ಕರಡು ನಕಾಶೆಯನ್ನು ಸಹ ತಯಾರಿಸಿರುತ್ತಾರೆ. ಅಪಘಾತಕ್ಕೀಡಾದ ವಾಹನಗಳನ್ನು ಪೋಲೀಸರು ಸ್ಥಳದಿಂದ ತೆರವುಗೊಳಿಸಿ ಠಾಣೆಗೆ ತಂದು ಮಹಜರ್ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಆರೋಪಿಯನ್ನು ನೋಡಿ ಗುರ್ತಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ - 4.** ಪ್ರಾ.ಸಾ.2/ಚಾ.ಸಾ.2 ಎಂ.ಡಿ.ಗುಲ್ಸನ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ27.01.2019 ರಂದು ಸಂಜೆ 6 ಗಂಟೆಯ ಸುಮಾರಿಗೆ ಚಾ.ಸಾ.2 ಮತ್ತು ಆರೋಪಿಯು ಸ್ಕೂಟಿಯಲ್ಲಿ ಗೋಣಿಕೊಪ್ಪದಿಂದ ಚೆಕ್ಕೆಸೊಡ್ಲೂರಿಗೆ ಬರುತ್ತಿದ್ದಾಗ, ಸರ್ವದೈವತಾ ಶಾಲೆಯ ಬಳಿ ಎದುರುಗಡೆಯಿಂದ ಬಂದ ಸ್ಪ್ಲೆಂಡರ್ ಬೈಕ್ ಚಾ.ಸಾ.2 ರವರ ಬೈಕಿಗೆ ಗುದ್ದಿದ ಪರಿಣಾಮ ಸದರಿ ವಾಹನದ ಚಾಲಕನಿಗೆ ಹಾಗೂ ಚಾ.ಸಾ.2 ಮತ್ತು ಆರೋಪಿಗೂ ಗಾಯಗಳಾಗಿ ಸ್ಥಳದಲ್ಲಿ ಪ್ರಜ್ಞೆ ತಪ್ಪಿರುತ್ತಾರೆ. ನಂತರ ಅವರನ್ನೆಲ್ಲ ಅಲ್ಲಿದ್ದ ಸಾರ್ವಜನಿಕರು ಗೋಣಿಕೊಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಕರೆದುಕೊಂಡು ಹೋಗಲು ತಿಳಿಸಿದ ಮೇರೆಗೆ ಅವರನ್ನು ಮತ್ತು ಆರೋಪಿಯನ್ನು ಮೈಸೂರಿನ ಬೃಂದಾವನ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಅಪಘಾತವು ಎದುರುಗಡೆಯಿಂದ ಬಂದ ವಾಹನದ ಚಾಲಕನ ತಪ್ಪಿನಿಂದಲೇ ಆಗಿರುತ್ತದೆ. ಪ್ರಕರಣದ ಬಗ್ಗೆ ಪೋಲೀಸರು ಚಾ.ಸಾ.2 ರವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ - 5.** ಪ್ರಾ.ಸಾ.5/ಚಾ.ಸಾ.19 ಸಿ.ಎನ್.ದಿವಾಕರ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ29.01.2019 ರಂದು ಪ್ರಕರಣದ ಕಡತವನ್ನು ಚಾ.ಸಾ.17 ರವರಿಂದ ಪಡೆದು ಪರಿಶೀಲಿಸಿ ತನಿಖೆ ಮುಂದುವರೆಸಿ ಚಾ.ಸಾ.1 ರವರನ್ನು ಠಾಣೆಗೆ ಕರೆಸಿ ಕೃತ್ಯ ಸ್ಥಳಕ್ಕೆ ಬೇಟಿ ನೀಡಿ ಪಂಚರ ಸಮಕ್ಷಮ ಸ್ಥಳ ಮಹಜರ್ ಮಾಡಿರುತ್ತಾರೆ. ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತಾರೆ. ದಿಃ16.08.2019 ರಂದು ವೈದ್ಯರು ನೀಡಿದ ವಿಸೇರಾ ವಸ್ತುಗಳನ್ನು ಸ್ವತ್ತು ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯದ ಅನುಮತಿ ಕೋರಿ ವಿಸೇರಾ ವಸ್ತುಗಳನ್ನು ಆರ್.ಎಫ್.ಎಸ್.ಎಲ್ ಗೆ

ಕಳುಹಿಸಿರುತ್ತಾರೆ. ದಿಃ23.02.2019 ರಂದು ಚಾ.ಸಾ.15 ವರದಿ ನೀಡಿರುತ್ತಾರೆ. ದಿಃ03.03.2019 ರಂದು ತನಗೆ ವರ್ಗಾವಣೆ ಆದ ಕಾರಣ ಶ್ರೀಧರ್ ರವರಿಗೆ ಕಡತವನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ

<u>ಪ್ರಶ್ನೆ ಸಂಖ್ಯೆ - 6.</u> ಪ್ರಾ.ಸಾ.6/ಚಾ.ಸಾ.20 ಕೆ.ಎಂ.ವಸಂತ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕಃ- 14.03.2019 ರಂದು ಪ್ರಕರಣದ ಕಡತವನ್ನು ಚಾ ಸಾ 19 ರವರಿಂದ ಪಡೆದು ಪರಿಶೀಲಿಸಿ ತನಿಖೆ ಮುಂದುವರಿಸಿರುತ್ತಾರೆ. ನಂತರ ಅಪಘಾತಪಡಿಸಿದ ವಾಹನಗಳಾದ ಕೆ ಎ 12 ಆರ್ 9533 ಹೊಂಡಾ ಆಕ್ಟೀವ್ ಮತ್ತು ಕೆ ಎ 54 ಇ 1652 ಸ್ಟಾರ್ ಸಿ ಟಿ ಬೈಕ್ ಗಳನ್ನು ಪರೀಕ್ಷಿಸಿ ವರದಿ ನೀಡುವಂತೆ ಮಡಿಕೇರಿ ಆರ್ ಟಿ ಒ ಅಧಿಕಾರಿಗೆ ಮನವಿ ಸಲ್ಲಿಸಿರುತ್ತಾರೆ. ಕೆ ಎ 54 ಇ 1652 ಸ್ಟಾರ್ ಸಿ ಟಿ ಬೈಕ್‌ನ ಬಿ ಎಕ್ಸ್ಟ್ರಾಕ್ಟ್ ನೀಡುವಂತೆ ನಾಗಮಂಗಲ ಆರ್ ಟಿ ಒ ಅಧಿಕಾರಿಗೆ ಮನವಿ ಸಲ್ಲಿಸಿರುತ್ತಾರೆ. ನಂತರ ದಿನಾಂಕ 27.03.2019 ರಂದು ನಾಗಮಂಗಲ ಆರ್ ಟಿ ಒ ರವರಿಂದ ಕೆ ಎ 54 ಇ 1652 ಸ್ಟಾರ್ ಸಿ ಟಿ ಬೈಕ್‌ನ ಬಿ ಎಕ್ಸ್ಟ್ರಾಕ್ಟ್ ವರದಿ ಪಡೆದಿರುತ್ತಾರೆ. ದಿನಾಂಕ 05.04.2019 ರಂದು ಆರ್ ಎಫ್ ಎಸ್ ಎಲ್ ವರದಿ ಪಡೆದಿರುತ್ತಾರೆ. ದಿನಾಂಕ 16.04.2019 ರಂದು ಆರೋಪಿ ಚಾಲಕ ಮಾಚಂಗಡ ಟಿ ಸಂಪತ್ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಹಾಜರಾಗಿದ್ದು, ಮಾನ್ಯ ನ್ಯಾಯಾಲಯದ ಆದೇಶದಂತೆ ಕ್ರಮ ನಿರ್ವಹಿಸಿರುತ್ತಾರೆ. ದಿನಾಂಕ 11.05.2019 ರಂದು ಕೆ ಎ 12 ಆರ್ 9533 ಹೊಂಡಾ ಆಕ್ಟೀವ ಬೈಕ್ ಅನ್ನು ನ್ಯಾಯಾಲಯದ ಆದೇಶದಂತೆ ಮಹಜರ್ ಮಾಡಿ ಮಾಲೀಕರಿಗೆ ಬಿಡುಗಡೆ ಮಾಡಿರುತ್ತಾರೆ. ದಿನಾಂಕ 18.05.2019 ರಂದು ಗಾಯಾಳುಗಳಾದ ಸಂಪತ್ ಮತ್ತು ಗುಲ್ಸನ್ ರವರ ಹೇಳಿಕೆಯನ್ನು ಹಾಗೂ ಗಾಯದ ಪ್ರಮಾಣ ಪತ್ರಗಳನ್ನು ಪಡೆದಿರುತ್ತಾರೆ. ದಿನಾಂಕ 23.05.2019 ರಂದು ಸದರಿ ವಾಹನಗಳ ಆರ್ ಟಿ ಒ ವರದಿ ಪಡೆದಿರುತ್ತಾರೆ. ಮೈಸೂರು ಆಸ್ಪತ್ರೆಯಿಂದ ಮೃತ ಸುಬ್ರಮಣಿ ಯಾನೆ ಕಾಳರವರ ಪಿ ಎಂ ವರದಿ ಪಡೆದಿರುತ್ತಾರೆ. ನಂತರ ಆರೋಪಿಯಾದ ತಮ್ಮ ವಿರುದ್ಧ ಆರೋಪ ಸಾಬೀತಾದ ಕಾರಣ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ

<u>ಪ್ರಶ್ನೆ ಸಂಖ್ಯೆ - 7.</u> ಪ್ರಾ.ಸಾ.7/ಚಾ.ಸಾ.18 ಮೇದಪ್ಪ ಕೆ.ಎಸ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ28.01.2019 ರಂದು ಚಾ.ಸಾ.19 ರವರು ದೂರವಾಣಿ ಕರೆ ಮಾಡಿ ಅವರ ಕಛೇರಿಗೆ ಬರುವಂತೆ ತಿಳಿಸಿರುತ್ತಾರೆ. ಮೃತ ಸುಬ್ರಮಣಿರವರ ಶವ ಪಂಚನಾಮೆಯನ್ನು ಸಿ.ಪಿ.ಐ ಅವರ ಆದೇಶದ ಮೇರೆಗೆ ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ ಮಾಡಿರುತ್ತಾರೆ. ನಂತರ ಮೃತರ ತಾಯಿ ಸೀತೆ ಹಾಗೂ ಸಹೋದರಿ ನೇತ್ರಾ ರವರ ಹೇಳಿಕೆ ಪಡೆದಿರುತ್ತಾರೆ. ನಂತರ ಮೃತ ದೇಹವನ್ನು ಮರಣೋತ್ತರ

ಪರೀಕ್ಷೆಗೆ ವೈದ್ಯರಲ್ಲಿ ಕಳುಹಿಸಿರುತ್ತಾರೆ. ನಂತರ ಸಿ.ಪಿ.ಐ ಕಛೇರಿಗೆ ಬಂದು ವರದ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

<u>ಪ್ರಶ್ನೆ ಸಂಖ್ಯೆ – 8.</u> ಪ್ರಾ.ಸಾ.8/ಚಾ.ಸಾ.13 ರಾಮಚಂದ್ರ ಕೆ.ಟಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ15.03.2019 ರಂದು ಚಾ.ಸಾ.20 ರವರ ಮನವಿಯಂತೆ ಗೋಣಿಕೊಪ್ಪ ಪೊ.ಠಾಣಾ ಆವರಣದಲ್ಲಿ ಅಪಘಾತಕ್ಕೀಡಾದ ವಾಹನಗಳನ್ನು ಪರಿಶೀಲಿಸಿ ವಾಹನಗಳ ಅಡೆತಡೆಗಳು ಸುಸ್ಥಿತಿಯಲ್ಲಿದ್ದು ಸದರಿ ಅಪಘಾತವು ಯಾವುದೇ ಯಾಂತ್ರಿಕ ದೋಷದಿಂದ ಸಂಭವಿಸಿರುವುದಿಲ್ಲ ಎಂದು ವರದಿಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

<u>ಪ್ರಶ್ನೆ ಸಂಖ್ಯೆ -9 :</u> ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ದಾಖಲಾತಿ ಹಾಜರುಪಡಿಸಲು ಬಯಸುವಿರಾ?

ಉತ್ತರಃ ಇಲ್ಲ

<u>ಪ್ರಶ್ನೆ ಸಂಖ್ಯೆ -10 :</u> ಈ ಪ್ರಕರಣದಲ್ಲಿ ನೀವೇನಾದರೂ ಹೇಳಬಯಸುವಿರಾ?

ಉತ್ತರಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತನು ನೀಡಿದ ಉತ್ತರಗಳನ್ನು ದಿಃ15-09-2025 ರಂದು ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು).

15-9-25

ಸ್ಥಳಃ ಪೊನ್ನಂಪೇಟೆ
ದಿಃ15.09.2025.

ಶ್ರೀ ಶ್ರೀನಾಥ್ ಎ
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.
ಪೊನ್ನಂಪೇಟೆ.